KAHS610012312022

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ.**

**ಉಪಸ್ಥಿತರುಃ**
**ಶ್ರೀಮತಿ ಕುಸುಮ.ವಿ. ಬಿ.ಎ.ಎಲ್. ಎಲ್.ಎಲ್.ಬಿ.**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನರಾಯಪಟ್ಟಣ.**

**ದಿನಾಂಕಃ 04 ನೇ ಏಪ್ರಿಲ್ ಮಾಹೆ 2026 ರಂದು**

**ಸಿ.ಸಿ. ನಂ.399/2022**

**ಫಿರ್ಯಾದಿ** : ಚನ್ನರಾಯಪಟ್ಟಣ ಅಬಕಾರಿ ಪೋಲೀಸ್ ಠಾಣೆ.

**(ಪರಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು)**

**ಃಃ ವಿರುದ್ಧ ಃಃ**

**ಆರೋಪಿ** : ಕೆ.ಎಸ್.ಪುನೀತ್ ಕುಮಾರ್,
ಬಿನ್ ಶಿವಣ್ಣ,
ವಯಸ್ಸು ಸುಮಾರು 20 ವರ್ಷ,
ವಾಸಃ ಕಾಮಸಮುದ್ರ ಗ್ರಾಮ,
ಹಳೇಕೋಟೆ ಹೋಬಳಿ,
ಹೊಳೆನರಸೀಪುರ ತಾಲ್ಲೂಕು.

**(ಪರವಾಗಿ ಶ್ರೀ ಎಂ.ಎಸ್.ಪಿ., ವಕೀಲರು)**

**ಃಃ ತೀರ್ಪು ಃಃ**

**ಚನ್ನರಾಯಪಟ್ಟಣ ಅಬಕಾರಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿ ವಿರುದ್ಧ ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ**

**ಕಾಯ್ದೆ 1985 ರ ಕಲಂ. 20(ಬಿ), 20(ii)(ಎ), 25 ಮತ್ತು 8(ಸಿ)** ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದಾರೆಂದು ದೋಷರೋಪಣೆ ಪಟ್ಟಿ ಸಲ್ಲಿಸಿದ್ದು ಇರುತ್ತದೆ.

**ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ವಿವರಣೆ :**

**2.** ಅಭಿಯೋಜನೆಯ ಪ್ರಕರಣವೇನೆಂದರೆ, ದಿನಾಂಕಃ **23-11-2021** ರಂದು ಮಧ್ಯಾಹ್ನ **2.25** ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಚನ್ನರಾಯಪಟ್ಟಣ ಟೌನ್, ಮೈಸೂರು ರಸ್ತೆ, ಗ್ರೀನ್ ಟ್ರೀ ಡಾಬಾದ ಪಕ್ಕ **2021-22** ನೇ ವಿಧಾನ ಪರಿಷತ್ ಚುನಾವಣಾ ಪ್ರಯುಕ್ತ ರಸ್ತೆಗಾವಲು ನಡೆಸುತ್ತಿದ್ದ ಸಮಯದಲ್ಲಿ ಹೊಂಡಾ ಡಿಯೋ ವಾಹನದ ನೊಂದಣಿ ಸಂಖ್ಯೆಃಕೆ.ಎ.**13.**ಇಆರ್.**9984** ದ್ವಿಚಕ್ರ ವಾಹನದಲ್ಲಿ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ **325** ಗ್ರಾಂ ಒಣ ಗಾಂಜಾವನ್ನು ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿರುವುದು ತನಿಖೆಯಿಂದ ದೃಢಪಟ್ಟಿರುವುದರಿಂದ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು ಇರುತ್ತದೆ.

**3.** ನ್ಯಾಯಾಲಯ ಈ ಮೇಲೆ ಹೇಳಿದ ಆರೋಪಣೆಗಳ ಮೇಲೆ ಸಂಜ್ಞೆಯನ್ನು ತೆಗೆದುಕೊಂಡು ಸಮನ್ಸ್ ಆದೇಶ ಮಾಡಿದ್ದು ಇರುತ್ತದೆ. ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡು ಸೂಕ್ತ ಬಂಧ ಪತ್ರ ನೀಡಿದ್ದು ಇರುತ್ತದೆ. ತದನಂತರ ದೋಷಾರೋಪಣ ಪಟ್ಟಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ **207** ರಂತೆ ಆರೋಪಿಗೆ ನೀಡಿದ್ದು, ದೋಷಾರೋಪಣೆಯನ್ನು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ.**8(ಸಿ)** ರ ನಿಯಮಗಳನ್ನು ಉಲ್ಲಂಘಿಸಿ, ಇದೇ ಕಾಯ್ದೆ ಕಲಂ.**20(ಬಿ)(ii)(ಎ)** ರ ಅಡಿಯಲ್ಲಿ ರಚಿಸಿದ್ದು ಇರುತ್ತದೆ. ಆನಂತರ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು ಇರುತ್ತದೆ. ಸದರಿ ದೋಷಾರೋಪಣೆಯನ್ನು ಆರೋಪಿ ಅಲ್ಲಗಳೆದಿದ್ದು ಇರುತ್ತದೆ. ತದನಂತರ ಮೇಲ್ಕಂಡ ಆರೋಪಣೆಗಳನ್ನು ನಿಸ್ಸಂಶಯವಾಗಿ ಆರೋಪಿ ವಿರುದ್ಧ ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಚಾ.ಸಾ.**1, 2, 5, 3** ಮತ್ತು **6** ರವರನ್ನು ಫ್ರಾಸಾ.**1** ರಿಂದ **5** ಅಂತ ಸಾಕ್ಷಿ ಮಾಡಿಸಿ ಅವರ ಪರ ನಿಪಿ.**1** ರಿಂದ **10** ದಾಖಲಾತಿಗಳನ್ನು ಹಾಜರುಪಡಿಸಿ

ಗುರುತಿಸಿಕೊಂಡಿದ್ದು ಇರುತ್ತದೆ. ಹಾಗೂ ಮುದ್ದೆಮಾಲನ್ನು ಮು.ಮಾ.1 ಎಂದು ಗುರುತಿಸಿಕೊಂಡಿರುತ್ತದೆ. ತದನಂತರ ಸಾಕ್ಷಿದಾರರ ಸಾಕ್ಷ್ಯದಿಂದ ಆರೋಪಿ ವಿರುದ್ಧವಾಗಿ ಸಾಕ್ಷ್ಯ ಕಂಡು ಬಂದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿ ಆರೋಪಿ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಆರೋಪಿ ತನ್ನ ಪರ ಯಾವುದೇ ಸಾಕ್ಷ್ಯ ಇಲ್ಲ ಎಂದು ನುಡಿದಿರುತ್ತಾರೆ.

**4.** ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿ ಪರ ವಕೀಲರ ಅಹವಾಲನ್ನು ಆಲಿಸಿ ಈ ಪ್ರಕರಣವನ್ನು ನಿಖಾಲೆಗೊಳಿಸುವ ಉದ್ದೇಶದಿಂದ ಈ ಕೆಳಕಂಡಂತೆ ಅಂಶಗಳನ್ನು ರಚಿಸಿರುತ್ತೇನೆ.

**ಃ ಅಂಶಗಳು ಃ**

1. ದಿನಾಂಕಃ **23-11-2021** ರಂದು ಮಧ್ಯಾಹ್ನ **2.25** ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಚನ್ನರಾಯಪಟ್ಟಣ ಟೌನ್, ಮೈಸೂರು ರಸ್ತೆ, ಗ್ರೀನ್ ಟ್ರೀ ಡಾಬಾದ ಪಕ್ಕ ಆರೋಪಿಯು ಹೊಂಡಾ ಡಿಯೋ ವಾಹನದ ನೊಂದಣಿ ಸಂಖ್ಯೆಃಕೆ.ಎ.13.ಇಆರ್.9984 ದ್ವಿಚಕ್ರ ವಾಹನದಲ್ಲಿ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ 325 ಗ್ರಾಂ ಒಣ ಗಾಂಜಾವನ್ನು ಸಾಗಾಣಿಕೆ ಮಾಡಿ, ಆ ಮೂಲಕ ಆರೋಪಿಯು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ.8(ಸಿ) ರ ನಿಯಮಗಳನ್ನು ಉಲ್ಲಂಘಿಸಿ, ಇದೇ ಕಾಯ್ದೆ ಕಲಂ.20(ಬಿ)(ii)(ಎ) ರ ಅಡಿಯಲ್ಲಿ ಅಪರಾಧ ಎಸಗಿರುತ್ತಾರೆಂದು ರುಜುವಾತುಪಡಿಸುತ್ತಾರೆಯೇ?
2. ಯಾವ ಆದೇಶ?

**5.** ಪ್ರಕರಣದಲ್ಲಿ ಲಭ್ಯವಿರುವ ನುಡಿಸಾಕ್ಷ್ಯ ಹಾಗೂ ದಾಖಲಾತಿ ಸಾಕ್ಷ್ಯ ಮತ್ತು ಅಹವಾಲಿನ ಆಧಾರದ ಮೇಲೆ ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಕಾರಣಗಳನ್ನು ನೀಡಿ ಉತ್ತರಿಸುತ್ತೇನೆ.

**ಅಂಶ 1 ಃ ನಕಾರಾತ್ಮಕವಾಗಿ**

**ಅಂಶ 2 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ**

## ಃ ಕಾರಣಗಳು ಃ

**6.** **ಅಂಶ ಸಂಖ್ಯೆ-1:** ಅಭಿಯೋಜನೆಯ ಪ್ರಕರಣವೇನೆಂದರೆ, ದಿನಾಂಕಃ **23-11-2021** ರಂದು ಮಧ್ಯಾಹ್ನ **2.25** ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಚನ್ನರಾಯಪಟ್ಟಣ ಟೌನ್, ಮೈಸೂರು ರಸ್ತೆ, ಗ್ರೀನ್ ಟ್ರೀ ಡಾಬಾದ ಪಕ್ಕ **2021-22** ನೇ ವಿಧಾನ ಪರಿಷತ್ ಚುನಾವಣಾ ಪ್ರಯುಕ್ತ ರಸ್ತೆಗಾವಲು ನಡೆಸುತ್ತಿದ್ದ ಸಮಯದಲ್ಲಿ ಹೊಂಡಾ ಡಿಯೋ ವಾಹನದ ನೊಂದಣಿ ಸಂಖ್ಯೆಃಕೆ.ಎ.**13**.ಇಆರ್.**9984** ದ್ವಿಚಕ್ರ ವಾಹನದಲ್ಲಿ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ **325** ಗ್ರಾಂ ಒಣ ಗಾಂಜಾವನ್ನು ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ ಎಂಬುದಾಗಿದೆ.

**7.** ಸದರಿ ಆರೋಪಣೆಗಳನ್ನು ನಿಸ್ಸಂಶಯವಾಗಿ ನ್ಯಾಯಾಲಯದ ಮುಂದೆ ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ.**1** ರವರನ್ನು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ **23.11.2021** ರಂದು ತಾನು, ಚಾಸಾ.**4** ಮತ್ತು **5** ಮತ್ತು ತಮ್ಮ ಸಿಬ್ಬಂದಿಯಾದ ಜೀವನ್ ರವರೊಂದಿಗೆ ಚನ್ನರಾಯಪಟ್ಟಣ ಹೊರವಲಯದ ಮೈಸೂರು ರಸ್ತೆಯಲ್ಲಿ ಮಧ್ಯಾಹ್ನ **02-00** ಗಂಟೆಯಲ್ಲಿ ರಸ್ತೆಗಾವಲು ನಡೆಸಿ, ವಾಹನಗಳನ್ನು ಪರಿಶೀಲಿಸುತ್ತಿದ್ದಾಗ ಮೈಸೂರು ಕಡೆಯಿಂದ ಒಬ್ಬ ವ್ಯಕ್ತಿಯು ಕೆಎ.**13**.ಇಆರ್.**9984** ಹೊಂಡಾ ಡಿಯೋ ದ್ವಿ ಚಕ್ರ ವಾಹನವನ್ನು ಚನ್ನರಾಯಪಟ್ಟಣ ಕಡೆಗೆ ಓಡಿಸಿಕೊಂಡು ಬರುತ್ತಿದ್ದು, ಅದನ್ನು ತಾವು ತಡೆದು ನಿಲ್ಲಿಸಿ, ಆತನ ಹೆಸರನ್ನು ಕೇಳಲಾಗಿ ಆತನ ಹೆಸರು ಪುನೀತಕುಮಾರ್ ಬಿನ್ ಶಿವಣ್ಣ, ಕಾಮಸಮುದ್ರ ಗ್ರಾಮ, ಹಳೆಕೋಟೆ ಹೋಬಳಿ, ಹೊಳೆನರಸೀಪುರ ತಾಲ್ಲೂಕು ಎಂದು ತಿಳಿಸಿದ್ದು, ನಂತರ ವಾಹನವನ್ನು ಶೋಧಿಸಬೇಕೆಂದು ತಿಳಿಸಿ, ಡಿಕ್ಕಿಯನ್ನು ತೆಗೆದು ನೋಡಲಾಗಿ, ವಾಹನದ ಡಿಕ್ಕಿಯಲ್ಲಿ ಗಾಟು ವಾಸನೆಯಿಂದ ಕೂಡಿದ ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಕವರ್ ದೊರಕಿದ್ದು, ಅದು ಅನುಮಾನಸ್ಪದವಾಗಿ ಕಂಡು ಬಂದ ಕಾರಣ, ಅದಕ್ಕೆ ಪಂಚರ ಅವಶ್ಯಕತೆ ಇದೆ

ಎಂದು ಮನಗಂಡು, ಸದರಿ ಸ್ಥಳದ ಪಕ್ಕದಲ್ಲಿದ್ದ ಗ್ರೀನ್ ಟ್ರೀ ಡಾಬಾದಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದು, ಅವರಿಗೆ ವಿಚಾರ ತಿಳಿಸಿ, ಪಂಚರಾಗಿ ಸಹಕರಿಸುವಂತೆ ಕೋರಲಾಗಿ ಅವರು ಒಪ್ಪಿಕೊಂಡಿದ್ದು, ನಂತರ ಅವರಿಗೆ ನೋಟಿಸ್ ನೀಡಲಾಯಿತು. ನಂತರ ಶೋಧನೆ ಮಾಡಲು ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ಸಾಕಷ್ಟು ಸಮಯ ಇಲ್ಲದೇ ಇರುವ ಕಾರಣ, ತಡ ಮಾಡಿದರೆ ಸಾಕ್ಷ್ಯ ನಾಶದ ಸಾಧ್ಯತೆ ಇರುವ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚ್ಚಯ ಆಧಾರವನ್ನು ತಯಾರಿಸಿ ಪಂಚರ ಸಹಿ ಪಡೆಯಲಾಯಿತು. ನಂತರ ಪಂಚರ ಸಮಕ್ಷಮ ವಾಹನ ಚಾಲಕನ ಸಮಕ್ಷಮ ಸದರಿ ಪ್ಲಾಸ್ಟಿಕ್ ಕವರನ್ನು ತೆಗೆದು ನೋಡಲಾಗಿ, ಅದರಲ್ಲಿ ಗಾಟು ವಾಸನೆಯಿಂದ ಕೂಡಿದ ಒಣ ಗಾಂಜಾ ಕಂಡು ಬಂದಿರುತ್ತದೆ. ಆ ಬಗ್ಗೆ ಆತನನ್ನು ಪ್ರಶ್ನೆ ಮಾಡಲಾಗಿ ಅದನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ.

**8.** ಪ್ರಾಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಮ್ಮ ವಾಹನದಲ್ಲಿದ್ದ ತೂಕದ ಯಂತ್ರದ ಸಹಾಯದಿಂದ ಸದರಿ ಒಣ ಗಾಂಜಾವನ್ನು ತೂಕ ಮಾಡಿ ನೋಡಲಾಗಿ ಅದು ಸುಮಾರು **320** ಗ್ರಾಂ ತೂಕವಿರುವುದು ಕಂಡು ಬಂದಿರುತ್ತದೆ, ನಂತರ ಅದನ್ನು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ ದಾರದಲ್ಲಿ ಕಟ್ಟಿ, ಹರಗಿನಿಂದ ಇಲಾಖಾ ಮೊಹರು ಮಾಡಲಾಯಿತು. ನಂತರ ಆತನಿಗೆ ಅಪರಾಧ ಬಗ್ಗೆ ಮನವರಿಕೆ ಮಾಡಿಕೊಟ್ಟು, ನಂತರ ಸದರಿ ಗಾಂಜಾ ಮತ್ತು ಸದರಿ ದ್ವಿಚಕ್ರ ವಾಹನವನ್ನು ಪಂಚರ ಸಮಕ್ಷಮ ಮಧ್ಯಾಹ್ನ **02-45** ರಿಂದ **3-40** ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ, ನಂತರ ಆರೋಪಿಯನ್ನು ಮತ್ತು ಮುದ್ದೆಮಾಲನ್ನು ವಶಪಡಿಸಿಕೊಂಡು, ಠಾಣೆಗೆ ಕರೆತಂದು ಆತನ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಬೆಂಗಾವಲಿನ ಮೇಲೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು, ದಿಃ **24-11-2021** ರಂದು ಅಮಾನತ್ತು ಪಡಿಸಿಕೊಂಡ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾನ್ಯ ನ್ಯಾಯಾಧೀಶರ ಮುಂದೆ ಮಾದರಿ ತೆಗದು ಇನ್ವೆಂಟರಿ ಮಾಡಿಸುವ ಸಲುವಾಗಿ ಅರ್ಜಿ ಸಲ್ಲಿಸಿದ್ದು, ಅದರಂತೆ ದಿಃ **25-11-2021** ರಂದು ಮಾನ್ಯ ನ್ಯಾಯಾಧೀಶರ ಮುಂದೆ ಸದರಿ **325** ಗ್ರಾಂ ಪೈಕಿ ಸುಮಾರು ತಲಾ **20** ಗ್ರಾಂನಂತೆ ಎರಡು ಪೊಟ್ಟಣಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಎಸ್.**1** ಮತ್ತು ಎಸ್.**2** ಎಂಬ ನಂಬರ್ ಗಳಾಗಿ ಬೇಪರ್ಡಿಸಲಾಯಿತು, ನಂತರ **24-11-2021** ರಂದು

ಚಾಸಾ-2 ರಿಂದ 5 ಮತ್ತು ಜೀವನ್ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 25-11-2021 ರಂದು ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-6 ರವರಿಗೆ ಹಸ್ತಾಂತರಿಸಿರುತ್ತೇನೆ, ಎಂದು ಸಾಕ್ಷ್ಯ ನುಡಿದಿರುತ್ತಾರೆ.

9. ಪ್ರಾಸಾ.1 ರವರು ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿದ್ದು, ಮುಂದುವರೆದು ಸದರಿಯವರು, ತಾನು ಠಾಣೆಯಿಂದ ಹೊರಟ ಸಮಯ ನೆನಪಿಲ್ಲ ಎಂದು, ಆ ದಿನ ತಾನು ಎಷ್ಟು ವಾಹನಗಳನ್ನು ತಪಾಸಣೆ ಮಾಡಿದೆ ಎಂದು ನೆನಪಿಲ್ಲ ಎಂದು ನುಡಿದಿರುತ್ತಾರೆ, ಹೀಗಾಗಿ ಸದರಿಯರಮ ಆ ದಿನ ತಾನು ಕೈಗೊಂಡ ತನಿಖೆಯ ಸಂಬಂಧ ಎಷ್ಟು ವಾಹನಗಳನ್ನು ತಪಾಸಣೆಗೆ ಒಳಪಡಿಸಿರುತ್ತೇನೆ ಎಂಬುದನ್ನು ನೆನಪಿಲ್ಲ ಎಂಬುದನ್ನು ಘಟನಾ ಸ್ಥಳದಲ್ಲಿ ಜನ ನಿಬಿಡ ಪ್ರದೇಶ ಎಂಬುದನ್ನು ಒಪ್ಪಿರುತ್ತಾರೆ.

10. ಚಾಸಾ.2 ರವರನ್ನು ಪ್ರಾಸಾ.2 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಮಹಜರ್ ಸಾಕ್ಷಿದಾರರಾಗಿದ್ದು, ಸದರ ಸಾಕ್ಷಿಯು 2021 ರಲ್ಲಿ ತಾನು ಮತ್ತು ಚಾಸಾ-3 ರವರು ಬಿ.ಎಂ. ರಸ್ತೆಯಲ್ಲಿರುವ ಗ್ರೀನ್ ಟ್ರೀ ಡಾಬಾದಲ್ಲಿ ಊಟ ಮಾಡುತ್ತಾ ಕುಳಿತಿದ್ದಾಗ, ಒಬ್ಬ ಮಹಿಳಾ ಅಬಕಾರಿ ಪೋಲೀಸರು ಅಲ್ಲಿಗೆ ಬಂದು ಗಾಂಜಾದ ಬಗ್ಗೆ ಮಾಹಿತಿ ಬಂದಿದ್ದು, ಚೆಕ್ ಮಾಡಬೇಕು ನೀವು ಜೊತೆಗೆ ಬನ್ನಿ ಎಂದು ತಮಗೆ ನೋಟೀಸು ನೀಡಿರುತ್ತಾರೆ, ಅದರಂತೆ ಅವರು ಆರೋಪಿಯ ಬೈಕಿನ ಡಿಕ್ಕಿಯಲ್ಲಿದ್ದ 325 ಗ್ರಾಂ ಗಾಂಜಾವನ್ನು ಸೀಜ್ ಮಾಡಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಸದರೀ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಸದರಿಯವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ, ಸದರಿ ಸಾಕ್ಷಿಯು ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಸದರಿ ಬೈಕಿನ ಸಂಖ್ಯೆ ಗೊತ್ತಿಲ್ಲ ಎಂದು ನುಡಿದಿದ್ದು ಅಬಕಾರಿ ಪೊಲೀಸರ ಕೋರಿಕೆಯ ಮೇರೆಗೆ ತಾನು ಮಹಜರ್ ಸವು ಮಾಡಿರುವುದಾಗಿ ನುಡಿದಿರುತ್ತಾರೆ ಹೀಗಾಗಿ ಸದರಿಯವರು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿದ್ದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**11.** ಚಾಸಾ.**5** ರವರನ್ನು ಪ್ರಾ.ಸಾ.**3** ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಸಿಬ್ಬಂದಿ ಹಾಗೂ ಮಹಜರ್ ಸಾಕ್ಷಿದಾರರಾಗಿದ್ದು ದಿಃ **23.11.2021** ರಂದು ಮಧ್ಯಾಹ್ನ **2.00** ಗಂಟೆ ಸಮಯದಲ್ಲಿ ಮೈಸೂರು ರಸ್ತೆಯ ಗ್ರೀನ್ ಟೀ ಡಾಬಾ ಪಕ್ಕದಲ್ಲಿ ತಾನು, ಚಾಸಾ-**1** ಚಾಸಾ-**4** ರವರು ರಸ್ತೆ ಗಾವಲುನಲ್ಲಿದ್ದಾಗ ಮೈಸೂರ ಕಡೆಯಿಂದ ದ್ವಿ ಚಕ್ರ ವಾಹನ ಕೆಎ.**13.**ಇಆರ್.**9984** ನ್ನು ತೆಡದು ನಿಲ್ಲಿಸಿ ಸದರಿ ವಾಹನವನ್ನು ಶೋಧನೆ ಮಾಡಲು ಪಂಚರ ಅವಶ್ಯಕತೆ ಇದ್ದುದ್ದರಿಂದ ಚಾಸಾ-**1** ರವರು ಚಾಸಾ-**2** ಮತ್ತು **3** ರವರನ್ನು ಕರೆದು ವಿಷಯ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು, ಅವರು ಒಪ್ಪಿರುತ್ತಾರೆ, ಸ್ದಳದಲ್ಲಿ ನೋಟೀಸನ್ನು ತಯಾರಿಸಿ ಜಾರಿ ಮಾಡಿ ನಂತರ ವಾಹನವನ್ನು ಶೋದನೆ ಮಾಡಿದಾಗ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ಸಾಕಷ್ಟು ಸಮಯಾವಕಾಶ ಇಲ್ಲದೇ ಇರುವ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ಆದಾರವನ್ನು ಚಾಸಾ-**1** ರವರು ತಯಾರಿಸಿಕೊಂಡು, ಅದಕ್ಕೆ ಪಂಚರ ಸಹಿಯನ್ನು ಸಹಿ ಪಡೆದುಕೊಳ್ಳಲಾಯಿತು. ನಂತರ ತಾವು ಪರಸ್ಪರ ಅಂಗಶೋಧನೆ ಮಾಡಿಕೊಂಡು, ಸದರಿ ವಾಹನವನ್ನು ಪರಿಶೀಲಿಸಿದಾಗ ವಾಹನದ ಡಿಕ್ಕಿಯಲ್ಲಿ ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಕವರ್ ಕಂಡುಬಂದಿದ್ದು ಅದನ್ನು ಪರಿಶೀಲಿಸಲಾಗಿ ಅರದಲ್ಲಿ ಒಣಗಿದ ಗಾಂಜಾ ಮಾದರಿಯ ಸೊಪ್ಪು ಇರುವುದು ಕಂಡುಬಂದಿರುತ್ತದೆ, ನಂತರ ವಾಹನ ಸವಾರರನ್ನು ಚಾಸಾ-**1** ರವರು ವಿಚಾರಿಸಿದಾಗ ಅವರ ಹೆಸರು ಪುನೀತ್ ಹೋಳೆನರಸೀಪುರ ಎಂದು ಉತ್ತರಿಸಿದ್ದು ಸದರಿ ಸೊಪ್ಪು ಗಾಂಜಾ ಎಂದು ಒಪ್ಪಿರುತ್ತಾರೆ, ಸ್ದಳದಲ್ಲಿ ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು, ಅವನ ಬಳಿ ಇದ್ದ ಸೊಪ್ಪನ್ನು ತಮ್ಮ ಬಳಿ ಇದ್ದ ತೂಕದ ಯಂತ್ರದ ಸಹಾಯದಿಂದ ತೂಕ ಮಾಡಲಾಗಿ ಅದರ ತೂಕ **325** ಗ್ರಾಂ ಒಣ ಗಾಂಜಾ ಇರುವುದು ಕಂಡುಬಂದಿರುತ್ತದೆ. ನಂತರ ಸದರಿ ಗಾಂಜಾವನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ದಾರದಲ್ಲಿ ಕಟ್ಟಿ ಅರಗಿನಿಂದ ಇಲಾಖಾ ಸೀಲನ್ನು ಮಾಡಲಾಯಿತು, ನಂತರ ಸ್ಥಳದಲ್ಲಿ ಮಾದರಿ ಸೀಲು ಮತ್ತು ಮಾದರಿ ಚೀಟಿಯನ್ನು ತಯಾರಿಸಿ, ಮಾದರಿ ಚೀಟಿಯನ್ನು ಸದರಿ ಚೀಲಕ್ಕೆ ಅಂಟಿಸಲಾಯಿತು, ಸ್ದಳದಲ್ಲಿಯೇ ಚಾಸಾ-**1** ರವರು ಮಹಜರ್ ಕ್ರಮವನ್ನು ಮದ್ಯಾಹ್ನ **2.45** ರಿಂದ **3.45** ರವರೆಗೆ ಮಹಜರ್ ಕ್ರಮ ಕೈಗೊಂಡಿರುತ್ತಾರೆ, ನಂತರ ಆರೋಪಿಯೋಂದಿಗೆ

ಠಾಣೆಗೆ ಹಾಜರಾಗಿ ಆರೋಪಿಯ ವಿರುದ್ದ ಪ್ರ.ವ ವರದಿಯನ್ನು ತಯಾರಿಸಿರುತ್ತಾರೆ, ದಿಃ **25.11.2021** ರಂದು ತಾನು ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಪ್ರಾಸಾ.**3** ರವರು ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿದ್ದು, ಸದರಿ ಸಾಕ್ಷಿಯು ಪೋಲೀಸ್ ಸಿಬ್ಬಂದಿಯಾಗಿದ್ದು ತನ್ನ ಮೇಲಾಧಿಕಾರಿಗಳ ಆದೇಶದಂತೆ ತಾನು ಮಹಜರಿಗೆ ಬಾಗಿಯಾಗಿರುವುದಾಗಿ ನುಡಿದಿರುತ್ತೆ. ಸದರಿಯವರು ಪೋಲೀಸ್ ಸಿಬ್ಬಂದಿಯಾಗಿರುವುದರಿಂದ ಅವರ ಸಾಕ್ಷ್ಯದಿಂದ ಆರೋಪಿ ವಿರುದ್ದದ ಆರೋಪವನ್ನು ಸಾಬೀತುಪಡಿಸಲಾಗಿರುವುದಿಲ್ಲ.

**13.** ಚಾಸಾ.**3** ರವರನ್ನು ಪ್ರಾಸಾ.**4** ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಅಮಾನತು ಮಹಜರ್ ಸಾಕ್ಷಿದಾರರಾಗಿದ್ದು, ಸಾಕ್ಷಿಗೆ ಶೋಧನಾ ಸಮ್ಮುಚಿತ ಆಧಾರ, ಸ್ದಳ ಮತ್ತು ಅಮಾನತ್ತು ಮಹಜರ್, ಮಾದರಿ ಸೀಲಿನ ನಕಲು, ವಸ್ತುಗಳ ಪಟ್ಟಿಯನ್ನು ನೋಡಿ ಗುರುತಿಸಿದ್ದು, ಸುಮಾರು **2-3** ವರ್ಷಗಳ ಹಿಂದೆ ತಾನು ಅಬಕಾರಿ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ, ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ, ತನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ, ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ, ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ತಾನು ಆರೋಪಿಯನ್ನು ನೋಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿದ್ದು, ಸದರಿಯವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ, ಸದರಿಯವರು ಪ್ರತಿಕೂಲ ಸಾಕ್ಷಿಯಾಗಿದ್ದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**14.** ಚಾಸಾ.**6** ರವರನ್ನು ಪ್ರಾಸಾ.**5** ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತನಿಖಾಧಿಕಾರಿಯಾಗಿದ್ದು ಕಡತವನ್ನು ಚಾಸಾ.**1** ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡು ಆರೋಪಿಯ ವಿರುದ್ದ

ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ. ಸದರಿಯವರು ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

15. ಈ ಪ್ರಕರಣದಲ್ಲಿ ಅಭಿಯೋಜನೆಯು ಪ್ರಾಸಾ.1, 3 ಮತ್ತು 5 ರವರುಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಇಲಾಖಾ ಸಿಬ್ಬಂದಿಯವರೇ ಆಗಿದ್ದು, ಸದರಿಯವರು ತಾವು ಕೈಗೊಂಡ ತನಿಖೆಯ ಬಗ್ಗೆ ಹಾಗೂ ದಾಳಿ ಕಾಲದಲ್ಲಿ ವಶಪಡಿಸಿಕೊಂಡ ಮು.ಮಾ.1 ರ ಬಗ್ಗೆ ನುಡಿದಿದ್ದು, ಪ್ರಾಸಾ.1 ರವರು ದಾಳಿ ಸಮಯದಲ್ಲಿ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆಯದೇ ದಾಳಿ ನಡೆಸಿದ್ದು, ಇದು ನಿಯಮದ ಉಲ್ಲಂಘನೆ ಎಂದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲದೇ ಪ್ರಾಸಾ.2 ಮತ್ತು 4 ರವರನ್ನು ದಾಳಿ ಸಮಯದಲ್ಲಿ ಪಂಚರನ್ನಾಗಿ ಬರಮಾಡಿಕೊಂಡಿದ್ದು, ಸದರಿಯವರು ತಮಗೆ ಯಾವುದೇ ವಿಚಾರಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಸದರಿಯವರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿದ್ದು, ಅಭಿಯೋಜನಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಈ ಪ್ರಕರಣದಲ್ಲಿ ಆರೋಪಿಯು ತಾನು ಸುಮಾರು 325 ಗ್ರಾನ,ಂ ಒಣ ಗಾಂಜಾವನ್ನು ಸಾಗಣೆ ಮಾಡುತ್ತಿದ್ದರು ಎಂದು ಆರೋಪ ಮಾಡಿದ್ದು ಸದರಿಯವರು ಈ ರೀತಿ ಕೃತ್ಯವನ್ನು ಎಸಗಿರುತ್ತಾರೆ ಎಂದು ರುಜುವಾತುಪಡಿಸುವಲ್ಲಿ ಅಭಿಯೋಜನೆಯು ಸಫಲವಾಗಿರುವುದಿಲ್ಲ ಆದ್ದರಿಂದ ಲಭ್ಯವಿರುವ ದೋಷಾರೋಪಣ ಪಟ್ಟಿ ಮತ್ತು ನಿಪಿ.1 ರಿಂದ 10 ಮು.ಮಾ.1 ಹಾಗೂ ಪ್ರಾಸಾ.1 ರಿಂದ 5 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ನೋಡಿದಾಗ ಅಭಿಯೋಜನೆಯು ದೋಷಾರೋಪಣೆ ಪಟ್ಟಿಯಲ್ಲಿ ಹೇಳಿರುವ ಆರೋಪಣೆಗಳನ್ನು ಆರೋಪಿ ಎಸಗಿದ್ದಾನೆ ಎಂದು ನಿಸ್ಸಂಶಯತೀತವಾಗಿ ರುಜುವಾತುಪಡಿಸಲು ವಿಫಲವಾಗಿದೆ ಎಂದು ಅಭಿಪ್ರಾಯಪಟ್ಟು **1 ನೇ ಅಂಶವನ್ನು ನಕಾರಾತ್ಮಕವಾಗಿ** ಉತ್ತರಿಸುತ್ತಿದ್ದೇನೆ.

16. **ಅಂಶ 2 :-** ಈ ಮೇಲೆ ಚರ್ಚಿಸಿದಂತೆ ಅಭಿಯೋಜನೆಯು ಆರೋಪಿ ಈ ಮೇಲೆ ಹೇಳಿದ ಆರೋಪಣೆಗಳಂತೆ ಅಪರಾಧ ಎಸಗಿದ್ದಾರೆ ಎಂದು ರುಜುವಾತುಪಡಿಸಲು ವಿಫಲವಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

## ⁝⁝ ಆದೇಶ ⁝⁝

ದಂ.ಪ್ರ.ಸಂ. ಕಲಂಃ 248(1) ರನ್ವಯ ಆರೋಪಿಯು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ.8(ಸಿ) ರ ನಿಯಮಗಳನ್ನು ಉಲ್ಲಂಘಿಸಿ, ಇದೇ ಕಾಯ್ದೆ ಕಲಂ.20(ಬಿ)(**ii**)(ಎ) ರ ಅಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಜಾಮೀನು ಹಾಗೂ ಬಂಧ ಪತ್ರವನ್ನು ಮೇಲ್ಮನವಿ ಅವಧಿ ಮುಗಿದ ನಂತರ ರದ್ದುಗೊಳಿಸಲು ಆದೇಶಿಸಿದೆ.

ಮುದ್ದೆಮಾಲು.1 ಅಮೌಲ್ಯವುಳ್ಳದ್ದಾಗಿದ್ದು ಅವುಗಳನ್ನು ಅಪೀಲು ಕಾಲಾವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

(ಈ ಮೇಲಿನ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ಆನಂತರ ಓದಿ ತಿದ್ದಿ ಇಂದು ಅಂದರೆ ದಿನಾಂಕಃ 04 ನೇ ಏಪ್ರಿಲ್ ಮಾಹೆ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ)

(ಶ್ರೀಮತಿ. ಕುಸುಮ.ವಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

## ⁝⁝ ಅನುಬಂಧ ⁝⁝

**ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿದಾರರುಗಳ ವಿವರ**

ಪ್ರಾ.ಸಾ.1 : ರೂಪ.ವಿ.ಕೆ
ಪ್ರಾ.ಸಾ.2 : ವೆಂಕಟೇಶ
ಪ್ರಾ.ಸಾ.3 : ಅಭಿಲಾಶ್
ಪ್ರಾ.ಸಾ.4 : ಲೋಹಿತ್
ಪ್ರಾ.ಸಾ.5 : ಅನಿತ.ಎಂ.ಜೆ

**ಅಭಿಯೋಜನೆ ಪರ ಗುರುತಿಸಲ್ಪಟ್ಟ ದಾಖಲಾತಿಗಳ ವಿವರಃ**

ನಿಪಿ.1 : ಶೋಧನಾ ಸಮುಚ್ಚಿತ ವಾರೆಂಟ್ ನೋಟೀಸು

| | | |
|---|---|---|
| ನಿಪಿ.1(ಎ,ಬಿ,ಸಿ) | : | ಸಹಿಗಳು |
| ನಿಪಿ.2 | : | ಅಮನಾತ್ತು ಮಹಜರ್ |
| ನಿಪಿ.2(ಎ,ಬಿ,ಸಿ,ಡಿ) | : | ಸಹಿಗಳು |
| ನಿಪಿ.3 | : | ಇನ್ವೆಂಟರಿ |
| ನಿಪಿ.3(ಎ,ಬಿ,ಸಿ,ಡಿ,ಇ) | : | ಸಹಿಗಳು |
| ನಿಪಿ.4, 5 | : | ವಾಹನದ 2 ಪೋಟೋಗಳು |
| ನಿಪಿ.6 | : | ಸ್ವತ್ತುಗಳ ಪಟ್ಟಿ |
| ನಿಪಿ.6(ಎ) | : | ಸಹಿ |
| ನಿಪಿ.7 | : | ಪ್ರಾ.ಸಾ.4 ರವರ ಹೇಳಿಕೆ |
| ನಿಪಿ.7(ಎ) | : | ಸಹಿ |
| ನಿಪಿ.8 | : | ಮನವಿ |
| ನಿಪಿ.8(ಎ) | : | ಸಹಿ |
| ನಿಪಿ.9 | : | ಬಿ.ಖಾತಾ ವಹಿ |
| ನಿಪಿ.10 | : | ರಾಸಾಯನಿಕ ವಿಶ್ಲೇಷಣಾ ವರದಿ |

ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿದಾರರುಗಳ ವಿವರಃ

- ಇಲ್ಲಾ -

ಆರೋಪಿತರ ಪರ ನಿಶಾನೆಯಾಗಿ ಗುರ್ತಿಸಲ್ಪಟ್ಟ ದಾಖಲಾತಿಗಳ ವಿವರಃ

- ಇಲ್ಲಾ -

ಅಭಿಯೋಜನೆ ಪರ ಗುರುತಿಸಲ್ಪಟ್ಟ ಮುದ್ದೆಮಾಲುಗಳ ವಿವರಃ

ಮು.ಮಾ. 1 ಃ ಗಾಂಜಾದ ಪ್ಯಾಕೇಟ್ ಗಳು

(ಶ್ರೀಮತಿ. ಕುಸುಮ.ವಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು
(ತೀರ್ಪಿನ ಪ್ರತಿಯನ್ನು ಪ್ರತ್ಯೇಕವಾಗಿ ಇಡಲಾಗಿದೆ)

:: **ಆದೇಶ** ::

**ದಂ.ಪ್ರ.ಸಂ. ಕಲಂಃ 248(1) ರನ್ವಯ ಆರೋಪಿಯು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ.8(ಸಿ) ರ ನಿಯಮಗಳನ್ನು ಉಲ್ಲಂಘಿಸಿ, ಇದೇ ಕಾಯ್ದೆ ಕಲಂ.20(ಬಿ)(ii)(ಎ) ರ ಅಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.**

**ಆರೋಪಿ ಜಾಮೀನು ಹಾಗೂ ಬಂಧ ಪತ್ರವನ್ನು ಮೇಲ್ಮನವಿ ಅವಧಿ ಮುಗಿದ ನಂತರ ರದ್ದುಗೊಳಿಸಲು ಆದೇಶಿಸಿದೆ.**

**ಮುದ್ದೆಮಾಲು.1 ಅಮೌಲ್ಯವುಳ್ಳದ್ದಾಗಿದ್ದು ಅವುಗಳನ್ನು ಅಪೀಲು ಕಾಲಾವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.**

(ಕುಸುಮ.ವಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಚನ್ನರಾಯಪಟ್ಟಣ.